# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1070 |
| ಮಾನ್ಯ ಸದಸ್ಯರ ಹೆಸರು | ಶ್ರೀಮತಿ ಹೇಮಲತ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 25.07.2024 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಮದ್ಯಪಾನದಿಂದ ಸಮಾಜದಲ್ಲಿ ದುಷ್ಪರಿಣಾಮಗಳುಂಟಾಗುತ್ತಿದ್ದು, ಹಲವಾರು ಕುಟುಂಬಗಳು ಬೀದಿಪಾಲಾಗುತ್ತಿದ್ದರೂ ಸಹ ಮದ್ಯದಂಗಡಿಗಳನ್ನು ತೆರೆಯಲು ಸರ್ಕಾರ ಅನುಮತಿ ನೀಡುತ್ತಿರುವುದು ಸರಿಯೇ; | ಸರ್ಕಾರದ ಮುಖ್ಯ ಧ್ಯೇಯೋದ್ದೇಶವೆಂದರೆ ಮದ್ಯ ಬಳಕೆಯನ್ನು ನಿಯಂತ್ರಿಸಿ ಮದ್ಯ ಬಳಕೆದಾರರಿಗೆ ಆರೋಗ್ಯಕರ ವಾತಾವರಣದಲ್ಲಿ ಉತ್ಕೃಷ್ಟ ದರ್ಜೆಯ ಮದ್ಯ ಸರಬರಾಜನ್ನು ಖಾತರಿಪಡಿಸಿಕೊಳ್ಳುವುದು. ಅಲ್ಲದೇ, ಮದ್ಯ ಸೇವನೆ ಮಾಡಲೇಬೇಕೆಂಬ ಹವ್ಯಾಸ ಇರುವ ಪಾನೀಕರಿಗೆ ಜವಾಬ್ದಾರಿಯುತ ಮದ್ಯ ಸೇವನೆಯನ್ನು ಪ್ರೋತ್ಸಾಹಿಸುವುದು. ಕಳ್ಳಭಟ್ಟಿ, ನಕಲಿ ಮದ್ಯ ಸೇವನೆಯಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಹಾಗೂ ಜೀವಹಾನಿ ಸಂಭವಿಸುವ ಸಾಧ್ಯತೆಯಿರುವುದರಿಂದ ಪಾನೀಕರಿಗೆ ಗುಣಮಟ್ಟದ ಮದ್ಯವನ್ನು ಸೇವನೆ ಮಾಡಲು ಸನ್ನದುಗಳನ್ನು ನೀಡಲಾಗುತ್ತಿದೆ. 1992 ರಿಂದ ರಾಜ್ಯದಲ್ಲಿ ಸಿಎಲ್-2 (ಚಿಲ್ಲರೆ ಮದ್ಯದಂಗಡಿ) ಮತ್ತು ಸಿಎಲ್-9 (ಬಾರ್ & ರಿಫ್ರೇಶ್ ಮೆಂಟ್ ರೂಮ್) ಸನ್ನದುಗಳನ್ನು ನಿರ್ಬಂಧಿಸಿರುವುದರಿಂದ ಹೊಸದಾಗಿ ಮಂಜೂರು ಮಾಡಲಾಗುತ್ತಿಲ್ಲ. ಈಗಾಗಲೇ, ಮಂಜೂರಾಗಿರುವ ಸಿಎಲ್-2 ಮತ್ತು ಸಿಎಲ್-9 ಸನ್ನದುಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ. 2007ರಲ್ಲಿ ಸಾರಾಯಿ ನಿಷೇಧದ ನಂತರ ಸರ್ಕಾರಿ ಸ್ವಾಮ್ಯದ ಎಂ.ಎಸ್.ಐ.ಎಲ್ ಸಂಸ್ಥೆಗೆ ಸಿಎಲ್(11-ಸಿ) ಸನ್ನದನ್ನು ನೀಡಲಾಗುತ್ತಿದೆ. |

| | | |
|---|---|---|
| ಆ | ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಎಲ್ಲೆಲ್ಲಿ ಎಷ್ಟೆಷ್ಟು ಮದ್ಯದಂಗಡಿಗಳನ್ನು ತೆರೆಯಲಾಗಿದೆ; ಯಾವ ಆಧಾರದಲ್ಲಿ ಅನುಮತಿ ನೀಡಲಾಗುತ್ತದೆ; | ರಾಜ್ಯದ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರುವ ಸನ್ನದುಗಳ ವಿವರಗಳನ್ನು **ಅನುಬಂಧ-01**ರಲ್ಲಿ ಇರಿಸಿದೆ.<br><br>ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ ನಿಯಮಗಳು) 1968ರ ನಿಯಮ 12 ರಲ್ಲಿ ತಾಲ್ಲೂಕಿನ ಜನಸಂಖ್ಯೆ ಮತ್ತು ಬೇಡಿಕೆಗನುಗುಣವಾಗಿ ಸಿಎಲ್-2 ಸನ್ನದಗಳ ಕೋಟಾ ನಿಗದಿಗೊಳಿಸಿ ಮಂಜೂರು ಮಾಡಬೇಕಾಗಿರುತ್ತದೆ. ನಗರ ಪ್ರದೇಶಕ್ಕೆ ಸಂಬಂಧಪಟ್ಟಂತೆ ಪ್ರತಿ 7500 ಜನಸಂಖ್ಯೆಗೆ ಒಂದರಂತೆ ಅಥವಾ 7500 ಜನಸಂಖ್ಯೆಯ ನಂತರ 3500 ಜನಸಂಖ್ಯೆ ಮೀರಿದ ಪಕ್ಷದಲ್ಲಿ ಇನ್ನು ಹೆಚ್ಚುವರಿಯಾಗಿ ಒಂದರಂತೆ ಸಿಎಲ್-2 ಸನ್ನದನ್ನು ಮಂಜೂರು ಮಾಡಬೇಕಾಗಿರುತ್ತದೆ. ಗ್ರಾಮೀಣ ಪ್ರದೇಶಕ್ಕೆ ಸಂಬಂಧಪಟ್ಟಂತೆ ಪ್ರತಿ 15000 ಜನಸಂಖ್ಯೆಗೆ ಒಂದರಂತೆ ಅಥವಾ 15000 ಜನಸಂಖ್ಯೆಯ ನಂತರ 7500 ಮೀರಿದ ಪಕ್ಷದಲ್ಲಿ ಇನ್ನು ಹೆಚ್ಚುವರಿಯಾಗಿ ಒಂದರಂತೆ ಸಿಎಲ್-2 ಸನ್ನದನ್ನು ಮಂಜೂರು ಮಾಡಬೇಕಾಗಿರುತ್ತದೆ. ಸಿಎಲ್-2 ಸನ್ನದಿಗೆ ಮಾತ್ರ ಕೋಟಾ ನಿಯಮ ಅನ್ವಯವಾಗುತ್ತಿದ್ದು, ಇನ್ನುಳಿದ ಯಾವುದೇ ಸನ್ನದುಗಳಿಗೆ ಕೋಟಾ ನಿಯಮ ಅನ್ವಯವಾಗುವುದಿಲ್ಲ. ಪ್ರಸ್ತುತ ಸರ್ಕಾರದ ನಿರ್ಬಂಧವಿರುವುದರಿಂದ 1992 ರಿಂದ ಹೊಸದಾಗಿ ಸಿಎಲ್-2 ಸನ್ನದುಗಳನ್ನು ಮಂಜೂರು ಮಾಡಲಾಗುತ್ತಿಲ್ಲ. |
| ಇ | ರಾಜ್ಯದಲ್ಲಿ ಸಿಎಲ್-2, ಸಿಎಲ್-4, ಸಿಎಲ್-6ಎ, ಸಿಎಲ್-7, ಸಿಎಲ್-9, ಸಿಎಲ್-11ಸಿ, ಆರ್.ವಿ.ಬಿ ಮತ್ತು ಇತರೆ ಪರವಾನಗಿಗಳನ್ನು ನೀಡಲು ಹಾಗೂ ಪಡೆಯಲು ಅನುಸರಿಸುವ ಮಾನದಂಡಗಳೇನು; (ಸಂಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿ ಸಿಎಲ್-4, ಸಿಎಲ್-6ಎ, ಸಿಎಲ್-7, ಸಿಎಲ್-11ಸಿ, ಮತ್ತು ಇತರೆ ಪರವಾನಗಿಗಳನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ 3 ಮತ್ತು 5 ರಡಿ ಹೊಸದಾಗಿ ಸನ್ನದುಗಳನ್ನು ಮಂಜೂರು ಮಾಡಲಾಗುತ್ತಿದೆ.<br><br>ಹೊಸದಾಗಿ ಮಂಜೂರು ಮಾಡುವ ಎಲ್ಲಾ ಸನ್ನದುಗಳಿಗೆ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 8, 8-ಎ ರಲ್ಲಿ ನಿಗಧಿಪಡಿಸಿರುವ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು |

| | | |
|---|---|---|
| | | ಶುಲ್ಕಗಳನ್ನು ಅರ್ಜಿದಾರರಿಂದ ಪಾವತಿಸಿಕೊಂಡು ಅರ್ಜಿ ಪಡೆಯಲಾಗುತ್ತದೆ. ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ-5 ರನ್ವಯ ಉದ್ದೇಶಿತ ಸನ್ನದಿನ 100 ಮೀಟರ್ ಅಂತರದೊಳಗೆ ಯಾವುದೇ ಶೈಕ್ಷಣಿಕ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಆಸ್ಪತ್ರೆಗಳು (30 ಬೆಡ್‌ಗಳನ್ನು ಹೊಂದಿರುವ ಆಸ್ಪತ್ರೆಗಳು) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳ ಕಾಲೋನಿಗಳು ಇರುವಂತಿಲ್ಲ. ಯಾವುದೇ ರಾಜ್ಯ ಸರ್ಕಾರದ/ಕೇಂದ್ರ ಸರ್ಕಾರದ ಕಛೇರಿಯಾಗಲೀ ಅಥವಾ ಸ್ಥಳೀಯ ಸಂಸ್ಥೆಗಳ ಕಛೇರಿಯಾಗಲೀ ಅವುಗಳ ಮುಖ್ಯಸ್ಥರು ಗ್ರೂಪ್ "ಎ" ಅಥವಾ ಗ್ರೂಪ್ "ಬಿ" ಅಧಿಕಾರಿಯಾಗಿದ್ದಲ್ಲಿ ಆ ಕಛೇರಿಯು ಆಕ್ಷೇಪಣಾ ಸ್ಥಳವೆಂದು ಪರಿಗಣಿಸಲ್ಪಡುತ್ತದೆ.<br><br>ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5(1) ರನ್ವಯ ಆಕ್ಷೇಪಣಾ ಸ್ಥಳವೆಂದು ಪರಿಗಣಿಸಲ್ಪಡುವ ಸ್ಥಳದಲ್ಲಿ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ:12164-12166/2016 ರ ದಿನಾಂಕ:31-03-2017 ರಲ್ಲಿ ಆದೇಶಿಸಿದಂತೆ 20,000 ಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 500 ಮೀಟರ್ (ಸರ್ವೀಸ್ ರಸ್ತೆಯು ಹಾದು ಹೋಗಿದ್ದಲ್ಲಿ ಸರ್ವೀಸ್ ರಸ್ತೆಯ ಅಂಚಿನಿಂದ ಅಥವಾ ರಾಜ್ಯ/ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಅಂತರದಲ್ಲಿ ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ. 20,000ಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 220 ಮೀಟರ್ (ಸರ್ವೀಸ್ ರಸ್ತೆಯು ಹಾದು ಹೋಗಿದ್ದಲ್ಲಿ ಸರ್ವೀಸ್ ರಸ್ತೆಯ ಅಂಚಿನಿಂದ ಅಥವಾ ರಾಜ್ಯ/ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಅಂತರದಲ್ಲಿ ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ. |

| | | |
|---|---|---|
| | | ಸರ್ಕಾರದ ಪತ್ರ ಸಂಖ್ಯೆ: ಆಇ 36 ಇಡಬ್ಲ್ಯೂಪಿ 2018, ದಿನಾಂಕ: 18.06.2020 ರಲ್ಲಿ 2011ರ ಜನಗಣತಿಯನ್ವಯ 5000 ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮ ಪಂಚಾಯಿತಿ/ಸ್ಥಳೀಯ ಪ್ರದೇಶಗಳ ವ್ಯಾಪ್ತಿಯಲ್ಲಿ ಹಾದು ಹೋಗುವ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಇಕ್ಕೆಲಗಳಲ್ಲಿ ಹೊಸದಾಗಿ ಸಿಎಲ್-6ಎ ಮತ್ತು ಸಿಎಲ್-7 ಸನ್ನದುಗಳಿಗೆ ಮಾತ್ರ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ (5)ರಡಿಯಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ವಿಧಿಸಿರುವ ನಿಬಂಧನೆಗಳನ್ನು ಹೊರತುಪಡಿಸಿ, ಇತರೆ ಷರತ್ತುಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ನಿಯಮಾನುಸಾರ ಪ್ರಾರಂಭಿಸಲು ವಿನಾಯಿತಿಯನ್ನು ನೀಡಲಾಗಿದೆ.<br><br>ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ:ಆಇ 33 ಇಎಫ್‌ಎಲ್ 2021, ದಿನಾಂಕ:19.01.2022ರಲ್ಲಿ ಸರ್ಕಾರದ ರಾಜಸ್ವ ಹಿತದೃಷ್ಠಿಯಿಂದ ಮತ್ತು ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಹೊಸದಾಗಿ ಮಂಜೂರು ಮಾಡುವ ಸಿಎಲ್-7(ಎ) ಸನ್ನದುಗಳಿಗೂ ವಿಸ್ತರಿಸಿ ಅನುಮತಿಯನ್ನು ನೀಡಲಾಗಿದೆ.<br><br>ಸರ್ಕಾರದ ಪತ್ರ ಸಂಖ್ಯೆ:ಆಇ 11 ಪಿಇಎಸ್ 2022, ದಿನಾಂಕ:13.01.2023ರನ್ವಯ ಅಬಕಾರಿ ಸನ್ನದು ಮಂಜೂರಾತಿ/ ಸ್ಥಳಾಂತರ ಮಾಡುವ ಸಂದರ್ಭದಲ್ಲಿ ಉದ್ದೇಶಿತ ಸ್ಥಳವು ಗ್ರಾಮ ಠಾಣಾ/ಗ್ರಾಮ ಪಂಚಾಯಿತಿ ಹಾಗೂ ನಗರ ಸ್ಥಳೀಯ ಪ್ರಾಧಿಕಾರ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳಿಗೆ ವಾಣಿಜ್ಯ ಉದ್ದೇಶಕ್ಕಾಗಿ ನಿಗದಿಪಡಿಸಿರುವ ಆಸ್ತಿ ತೆರಿಗೆಯನ್ನು ಪಾವತಿಸಿ, ಸಕ್ಷಮ ಪ್ರಾಧಿಕಾರಗಳು ನೀಡುವ ಉದ್ದಿಮೆ ಪರವಾನಿಗೆ ಅಥವಾ ನಿರಾಕ್ಷೇಪಣಾ ಪತ್ರವನ್ನು ಪಡೆಯಲಾಗುತ್ತಿದೆ.<br><br>**ಸಿಎಲ್-2 (ಚಿಲ್ಲರೆ ಮದ್ಯ ಮಾರಾಟ):** ಸಿಎಲ್-2 ಸನ್ನದುಗಳಲ್ಲಿ ಮದ್ಯವನ್ನು ಪಾರ್ಸಲ್ ಮೂಲಕ ಮಾತ್ರ |

| | | |
|---|---|---|
| | | ಮಾರಾಟ ಮಾಡಬೇಕಾಗಿರುತ್ತದೆ. ಸನ್ನದು ಆವರಣದಲ್ಲಿ ಕುಡಿಯಲು ಅವಕಾಶವಿರುವುದಿಲ್ಲ.<br><br>**ಸಿಎಲ್–9 (ಬಾರ್ ಅಂಡ್ ರೆಸ್ಟೋರೆಂಟ್):–** ಸಿಎಲ್–9 ಸನ್ನದುಗಳಲ್ಲಿ ಸನ್ನದು ಆವರಣದಲ್ಲಿ ಊಟದೊಂದಿಗೆ ಮದ್ಯವನ್ನು ಸೇವಿಸಲು ಅವಕಾಶವಿದ್ದು ಪಾರ್ಸಲ್ ಮಾರಾಟಕ್ಕೆ ಅವಕಾಶವಿರುವುದಿಲ್ಲ. ಸದರಿ ಸನ್ನದಿನಲ್ಲಿ ಊಟದ ಹಾಲ್ ಕನಿಷ್ಠ 400 ಚದರ ಅಡಿಗಳಿರಬೇಕು. ಅಡಿಗೆ ಕೋಣೆ ಮತ್ತು ಶೌಚಾಲಯಗಳು ಪ್ರತ್ಯೇಕವಾಗಿರಬೇಕು. ಗ್ರಾಹಕರರು ಅಡಿಗೆ ಕೋಣೆಯ ಮೂಲಕ ಶೌಚಾಲಯಕ್ಕೆ ಹೋಗುವಂತೆ ಮಾರ್ಗವು ಇರಬಾರದು. ಪುರುಷ ಮತ್ತು ಮಹಿಳೆಯರ ಪ್ರತ್ಯೇಕ ಶೌಚಾಲಯಗಳು ಇರಬೇಕು.<br><br>**ಸಿಎಲ್–4 (ಕ್ಲಬ್):–** ಸಿಎಲ್–4 ಸನ್ನದನ್ನು ಏಜೆಂಟ್, ಕಾರ್ಯದರ್ಶಿ ಅಥವಾ ಕ್ಲಬ್‌ನ ವ್ಯವಸ್ಥಾಪಕರುಗಳಿಗೆ ಫಾರಂ ಸಿಎಲ್–4 ನಲ್ಲಿ ಸನ್ನದನ್ನು ಜಿಲ್ಲಾಧಿಕಾರಿಗಳು ಮಂಜೂರು ಮಾಡುತ್ತಾರೆ. ಕರ್ನಾಟಕ ಸರ್ಕಾರದ ಸೊಸೈಟಿ ರಿಜಿಸ್ಟ್ರೇಶನ್ ಕಾಯ್ದೆ 1960 (ಕರ್ನಾಟಕ ಆಕ್ಟ್ 17 ಆಫ್ 1960) ಇಂಡಿಯನ್ ಟ್ರಸ್ಟ್ ಕಾಯ್ದೆ 1882, ಕಲಂ 25 ರ ಕಂಪನೀ ಕಾಯ್ದೆ 1956, ಹಾಗೂ ಕಲಂ 8 ರ ಕಂಪನೀ ಕಾಯ್ದೆ 2013 ರಡಿ ಕ್ಲಬ್ ಅನ್ನು 5 ವರ್ಷಗಳಿಗೆ ಕಡಿಮೆ ಇಲ್ಲದಂತೆ ನೊಂದಾಯಿಸಬೇಕಾಗಿರುತ್ತದೆ ಹಾಗೂ ಕ್ಲಬ್ 100 ಜನ ಕಾಯಂ ಸದಸ್ಯರನ್ನು ಹೊಂದಿರಬೇಕು. ಸ್ವಂತ ಕಟ್ಟಡ ಇಲ್ಲವೇ 11 ವರ್ಷಗಳ ಅವಧಿಗೆ ಕ್ಟಟಡವನ್ನು ಲೀಸ್ ಆಧಾರದ ಮೇಲೆ ಪಡೆದಿರಬೇಕು. ಕ್ಲಬ್‌ನಲ್ಲಿ ಒಳಾಂಗಣ ಮತ್ತು ಹೊರಾಂಗಣ ಕ್ರೀಡೆಗಳನ್ನು ನಡೆಸಲು ಸೌಲಭ್ಯಗಳನ್ನು ಕಲ್ಪಿಸಬೇಕು. ಕ್ಲಬ್‌ನ ಸದಸ್ಯರುಗಳಿಗೆ ಮದ್ಯ ಹಾಗೂ ಆಹಾರವನ್ನು ಸೇವಿಸಲು ಸೂಕ್ತ ಸೌಲಭ್ಯಗಳನ್ನು ಕಲ್ಪಿಸಬೇಕು. ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಶೌಚಾಲಯವನ್ನು ನಿರ್ಮಿಸಿ ನೀರಿನ ವ್ಯವಸ್ಥೆಯನ್ನು ಕಲ್ಪಿಸಿರಬೇಕು. |

| | | |
|---|---|---|
| | | **ಸಿಎಲ್–6ಎ:–** ಸಿಎಲ್–6ಎ ಸನ್ನದು (ಸ್ಟಾರ್ ಹೋಟೆಲ್) ಎಂದರೆ ಆ ಹೋಟೆಲ್ ಭಾರತ ಸರ್ಕಾರದ ಪ್ರವಾಸೋದ್ಯಮ ಇಲಾಖೆಯಿಂದ ಸ್ಟಾರ್ ಕೆಟಗರಿಯನ್ನು ಪಡೆದಿರಬೇಕಾಗಿರುತ್ತದೆ. ಈ ಪರವಾನಗಿಯನ್ನು ಪಡೆದ ಸನ್ನದುದಾರರು ಸನ್ನದಿನಲ್ಲಿ ತಂಗುವಂತಹ ಗ್ರಾಹಕರಿಗೆ ಮಾತ್ರ ಮದ್ಯವನ್ನು ಸರಬರಾಜು ಮಾಡಬಹುದಾಗಿರುತ್ತದೆ. ಹಾಗೂ ಸನ್ನದಿನಲ್ಲಿ ಒಂದಕ್ಕಿಂತ ಹೆಚ್ಚಿನ ಕೌಂಟರ್‌ಗಳನ್ನು ತೆರೆಯಲು ಅವಕಾಶವಿರುತ್ತದೆ.<br><br>**ಸಿಎಲ್–7:–** ಸನ್ನದು (ಹೋಟೆಲ್ ಮತ್ತು ವಸತಿ ಗೃಹಗಳು) ಎಂದರೆ:– ವಸತಿ ಗೃಹಗಳಲ್ಲಿ ತಂಗುವ ಗ್ರಾಹಕರಿಗೆ ಮತ್ತು ಅವರ ಅತಿಥಿಗಳಿಗೆ ಊಟದೊಂದಿಗೆ ಮದ್ಯವನ್ನು ಸೇವಿಸುವವರಿಗೆ ಮತ್ತು ಸಾಂದರ್ಭಿಕ ಸಂದರ್ಶಕರುಗಳಿಗೆ ಮದ್ಯ ಸೇವಿಸಲು ಅವಕಾಶ ಕಲ್ಪಿಸಬೇಕಾಗಿರುತ್ತದೆ.<br><br>**ಸಿಎಲ್–11ಸಿ:–** ಸಿಎಲ್–11(ಸಿ) ಸನ್ನದುಗಳನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಯಾದ ಎಂ.ಎಸ್.ಐ.ಎಲ್ ಸಂಸ್ಥೆಗೆ ನೀಡಲಾಗುತ್ತಿದೆ. ಸಿಎಲ್–11(ಸಿ) ಸನ್ನದುಗಳಲ್ಲಿ ಮದ್ಯವನ್ನು ಪಾರ್ಸಲ್ ಮೂಲಕ ಮಾತ್ರ ಮಾರಾಟ ಮಾಡಬೇಕಾಗಿರುತ್ತದೆ. ಸನ್ನದು ಆವರಣದಲ್ಲಿ ಕುಡಿಯಲು ಅವಕಾಶವಿರುವುದಿಲ್ಲ. ಎಂ.ಎಸ್.ಐ.ಎಲ್ ಮದ್ಯದ ಮಳಿಗೆಗಳನ್ನು ಮಂಜೂರು ಮಾಡಲು ಸರ್ಕಾರ ಅನುಸರಿಸುವ ಮಾನದಂಡಗಳು ಕೆಳಕಂಡಂತಿರುತ್ತವೆ:<br><br>ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 07 ಇಎಫ್‌ಎಲ್ 2008 ದಿನಾಂಕ:03.07.2009ರಲ್ಲಿ ಪ್ರತಿ ತಾಲ್ಲೂಕಿಗೆ ಕನಿಷ್ಟ 2 ಸನ್ನದುಗಳಂತೆ 352 ಸನ್ನದುಗಳು, ಜಿಲ್ಲಾ ಕೇಂದ್ರಸ್ಥಾನಕ್ಕೆ 2ರಂತೆ 58 ಸನ್ನದುಗಳು ಹಾಗೂ ಎಂಎಸ್‌ಐಎಲ್ ಸಂಸ್ಥೆ ಪ್ರಾದೇಶಿಕ ಬೇಡಿಕೆ ಅಧ್ಯಯನ ಆಧರಿಸಿ ಕೋರಿಕೆ ಸಲ್ಲಿಸುವ ಸ್ಥಳಗಳಿಗೆ 53 ಸನ್ನದುಗಳಂತೆ ಒಟ್ಟು 463 ಸನ್ನದುಗಳನ್ನು ಹಂಚಿಕೆ ಮಾಡಲಾಗಿದೆ. |

| | | |
|---|---|---|
| | | ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ 15 ಇಎಫ್ಎಲ್ 2015 ದಿ:23.09.2016ರಲ್ಲಿ ರಾಜ್ಯದ 220 ವಿಧಾನ ಸಭಾ ಕ್ಷೇತ್ರಗಳಿಗೆ ಪ್ರತಿ ಕ್ಷೇತ್ರಕ್ಕೆ 4 ಸನ್ನದುಗಳಂತೆ ಒಟ್ಟು 880, ಯಾದಗಿರಿ ಜಿಲ್ಲೆಯ ನಾಲ್ಕೂ ವಿಧಾನ ಸಭಾ ಕ್ಷೇತ್ರಗಳಿಗೆ ತಲಾ 5 ರಂತೆ ಒಟ್ಟು 20, ಹೀಗೆ ರಾಜ್ಯದಲ್ಲಿ ಒಟ್ಟಾರೆ 900 ಸಿಎಲ್ 11–ಸಿ ಸನ್ನದುಗಳನ್ನು ಕೆಳಕಂಡ ಷರತ್ತುಗಳನ್ನು ವಿಧಿಸಿ ಎಂ.ಎಸ್.ಐ.ಎಲ್ ಸಂಸ್ಥೆಗೆ ಮಂಜೂರಾತಿ ನೀಡಲು ಸರ್ಕಾರವು ಅನುಮತಿ ನೀಡಿರುತ್ತದೆ.<br><br>i. ಎಂ.ಎಸ್.ಐ.ಎಲ್ ಸಂಸ್ಥೆಯೇ ತನ್ನ ವಾಣಿಜ್ಯ ಕಾರ್ಯಸಾಧ್ಯತೆಗೆ ಅನುಗುಣವಾಗಿ ಸನ್ನದುಗಳ ಸ್ಥಳವನ್ನು ನಿಗಧಿಗೊಳಿಸುವುದು. ಎಂ.ಎಸ್.ಐ.ಎಲ್ ಸಂಸ್ಥೆಯ ಅಧಿಕಾರಿಗಳು ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಮದ್ಯದಂಗಡಿಗಳನ್ನು ತೆರೆಯುವ ನಿರ್ದಿಷ ಸ್ಥಳಗಳನ್ನು ಗುರುತಿಸುವುದು.<br><br>ii. ಈ ರೀತಿ ಗುರುತಿಸುವ ಸ್ಥಳಗಳು ಸರ್ಕಾರವು ತಿಳಿಸಿರುವ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲೇ ಇರಬೇಕು ಹಾಗೂ ನಿಗದಿಪಡಿಸಿರುವ ಸಂಖ್ಯೆಯ ಮಿತಿಯಲ್ಲೇ ಇರಬೇಕು.<br><br>iii. ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಮತ್ತೊಂದು ವಿಧಾನಸಭಾ ಕ್ಷೇತ ವ್ಯಾಪ್ತಿಗೆ ವರ್ಗಾವಣೆ ಆಗದಂತೆ ನೋಡಿಕೊಳ್ಳತಕ್ಕದ್ದು.<br><br>ಸರ್ಕಾರದ ಪತ್ರ ಸಂಖ್ಯೆ: ಎಫ್‌ಡಿ 08 ಇಎಫ್ಎಲ್ 2020 ದಿನಾಂಕ:08.09.2020 ರಲ್ಲಿ ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ಬಾಕಿ ಉಳಿದಿರುವ 441 ಸಿಎಲ್–11ಸಿ ಕೋಟಾದಡಿಯಲ್ಲಿನ ಸನ್ನದುಗಳನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪ್ರಾರಂಭಿಸಲು ಸರ್ಕಾರದ ಅನುಮತಿ ನೀಡಲಾಗಿದೆಯೆಂದು ನಿರ್ದೇಶಿಸಿರುತ್ತದೆ:<br><br>i. ಎಂ.ಎಸ್.ಐ.ಎಲ್ ಸಂಸ್ಥೆಗೆ ತನ್ನ ವಾಣಿಜ್ಯ ಕಾರ್ಯ ಸಾಧ್ಯತೆಗೆ ಅನುಗುಣವಾಗಿ ಸನ್ನದುಗಳ ಸ್ಥಳವನ್ನು |

| | | |
|---|---|---|
| | | ನಿಗದಿಗೊಳಿಸುವುದು. ಎಂ.ಎಸ್.ಐ.ಎಲ್ ಸಂಸ್ಥೆಯ ಅಧಿಕಾರಿಗಳು ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಮದ್ಯದಂಗಡಿಗಳನ್ನು ತೆರೆಯುವ ನಿರ್ದಿಷ್ಟ ಸ್ಥಳಗಳನ್ನು ಗುರುತಿಸುವುದು.<br><br>ii. ಸಿಎಲ್–11ಸಿ ಕೋಟಾದಲ್ಲಿನ ಬಾಕಿ ಇರುವ 441 ಚಿಲ್ಲರೆ ಮದ್ಯ ಮಾರಾಟ ಸನ್ನದುಗಳ ಪೈಕಿ ಯಾವುದಾದರೂ ಸನ್ನದನ್ನು ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಮತ್ತೊಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ವರ್ಗಾವಣೆ ಮಾಡುವುದಾದಲ್ಲಿ ಅದೇ ಜಿಲ್ಲೆಯ ಬೇರೆ ಯಾವುದಾದರೂ ಅಗತ್ಯವಿರುವ ವಿಧಾನಸಭಾ ಕ್ಷೇತ್ರಕ್ಕೆ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳಕ್ಕೆ ವರ್ಗಾವಣೆ ಮಾಡಿಕೊಳ್ಳತಕ್ಕದ್ದು.<br><br>iii. ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಸನ್ನದು ಸ್ಥಳಗಳನ್ನು ಗುರುತಿಸಿ ಅಬಕಾರಿ ಇಲಾಖೆಗೆ ಸಲ್ಲಿಸಿದ ನಂತರ ಅಂತಹಾ ಸನ್ನದು ಸ್ಥಳಗಳು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳದಲ್ಲಿರುವಂತೆ ಹಾಗೂ ಇತರೇ ಸಂಬಂಧಿಸಿದ ನಿಯಮಗಳಿಗೆ ಪೂರಕವಾಗಿರುವಂತೆ ಸಂಬಂಧಪಟ್ಟ ಅಬಕಾರಿ ಉಪ ಆಯುಕ್ತರು ನೋಡಿಕೊಳ್ಳುವುದು.<br><br>ಸರ್ಕಾರದ ಸುತ್ತೋಲೆ ಸಂಖ್ಯೆ:ಎಫ್‌ಡಿ 65 ಇಡಬ್ಲ್ಯೂಪಿ 2020 ದಿನಾಂಕ:09.10.2020 ರನ್ವಯ ವಿಧಿಸಿರುವ ಈ ಕೆಳಕಂಡ ಷರತ್ತುಗಳನ್ನು ದೃಢೀಕರಿಸಿಯೇ ಪ್ರಸ್ತಾವನೆಗಳನ್ನು ಸಲ್ಲಿಸಬೇಕಾಗಿ ಸರ್ಕಾರವು ಸೂಚಿಸಿರುತ್ತದೆ.<br><br>1. ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 2 ಹಾಗೂ ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ ನಿಯಮ 4(1)(ಬಿ) ರಲ್ಲಿನ |

| | | |
|---|---|---|
| | | ನಮೂನೆ ಸಿಎಲ್-1ಎ ರಂತೆ ಮೆ:ಎಂ.ಎಸ್.ಐ.ಎಲ್ ಸಂಸ್ಥೆಯು ಅರ್ಜಿಯನ್ನು ಸಲ್ಲಿಸತಕ್ಕದ್ದು.<br>2. ಎಂ.ಎಸ್.ಐ.ಎಲ್ ಪರವಾಗಿ ಸಿಎಲ್–11ಸಿ ಸನ್ನದಿಗೆ ಅರ್ಜಿ ಸಲ್ಲಿಸುವ ವ್ಯಕ್ತಿಯು ಎಂ.ಎಸ್.ಐ.ಎಲ್ ನಿರ್ದೇಶಕರ ಮಂಡಳಿಯಿಂದ ದೃಢೀಕೃತಗೊಂಡು ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ ನಿಯಮ 4ರಲ್ಲಿನ ನಿಗದಿತ ನಮೂನೆ ಸಿಎಲ್-1ಎ ರಂತೆ ಸಿಎಲ್–11ಸಿ ಸನ್ನದಿಗೆ ಅರ್ಜಿ ಸಲ್ಲಿಸತಕ್ಕದ್ದು.<br>3. ಎಂ.ಎಸ್.ಐ.ಎಲ್ ಸಂಸ್ಥೆಯು ಸಿಎಲ್–11ಸಿ ಸನ್ನದಿಗೆ ಅರ್ಜಿಯನ್ನು ಸನ್ನದು ಸಕ್ಷಮ ಪ್ರಾಧಿಕಾರವಾದ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ನೇರವಾಗಿ ಸಲ್ಲಿಸತಕ್ಕದ್ದು.<br>ಮುಂದುವರೆದು, ಈ ಎಲ್ಲಾ ಸನ್ನದುಗಳನ್ನು ಮಂಜೂರು ಮಾಡುವಾಗ ಅರ್ಜಿದಾರರುಗಳು ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ ನಿಯಮ 4(ಬಿ) ಪ್ರಕಾರ ಅನರ್ಹರಾಗದಿರುವ ಬಗ್ಗೆ ಸ್ವಯಂಘೋಷಿತ ಮುಚ್ಚಳಿಕೆಯನ್ನು ಪಡೆಯಲಾಗುತ್ತಿರುತ್ತದೆ. |
| ಈ | ಒಂದು ಪರವಾನಗಿ ಪಡೆದ ಉದ್ದಿಮೆದಾರರು ಅದೇ ಪರವಾನಗಿಯಡಿಯಲ್ಲಿ ಜಿಲ್ಲೆಯ ಬೇರೆ ಬೇರೆ ಜಾಗಗಳಲ್ಲಿ ಅಬಕಾರಿ ಮಳಿಗೆಗಳು/ಬಾರ್ ಅಂಡ್ ರೆಸ್ಟೋರೆಂಟ್ ಹಾಗೂ ಇತರೆ ಮಳಿಗೆಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಒಂದು ಪರವಾನಿಗೆ ಪಡೆದು ಉದ್ದಿಮೆದಾರರು ಅದೇ ಪರವಾನಿಗೆಯಲ್ಲಿ ಬೇರೆ ಜಾಗದಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲು ಅವಕಾಶ ಮಾಡಿಕೊಟ್ಟ ಒಂದು ಪ್ರಕರಣವಿದ್ದು, ಅದಕ್ಕೆ ಸಂಬಂಧಿಸಿದ ವಿವರವನ್ನು **ಅನುಬಂಧ–2ರಲ್ಲಿ** ಇರಿಸಿದೆ. |

| | | |
|---|---|---|
| ಉ | ಪರವಾನಗಿ ಮಂಜೂರು ಮಾಡುವ ಸಂದರ್ಭದಲ್ಲಿ ಅಧಿಕಾರಿಗಳು ಮಾನ ದಂಡಗಳನ್ನು ಅನುಸರಿಸದೇ ಉಲ್ಲಂಘನೆ ಮಾಡಿ ಪರವಾನಗಿ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಯಾವ ಯಾವ ಶಿಸ್ತಿನ ಕ್ರಮಗಳನ್ನು ಕೈಗೊಳ್ಳಲಾಗಿದೆ? (ವಿವರ ನೀಡುವುದು) | ಸನ್ನದುಗಳ ಪರವಾನಗಿ ಮಂಜೂರು ಮಾಡುವ ಸಂದರ್ಭದಲ್ಲಿ ಅಧಿಕಾರಿಗಳು ಮಾನದಂಡಗಳನ್ನು ಅನುಸರಿಸದೇ ಉಲ್ಲಂಘನೆ ಮಾಡಿ ಪರವಾನಗಿ ಮಂಜೂರು ಮಾಡಿರುವ 03 ಪ್ರಕರಣಗಳಿದ್ದು, ವಿವರಗಳನ್ನು **ಅನುಬಂಧ–3ರಲ್ಲಿ** ಇರಿಸಿದೆ. |

ಆಇ 74 ಇಎಲ್‌ಕ್ಯೂ 2024

(ಆರ್.ಬಿ. ತಿಮ್ಮಾಪುರ)

ಅಬಕಾರಿ ಸಚಿವರು

| ಅನುಬಂಧ-1 | | | | |
|---|---|---|---|---|
| ದಿನಾಂಕ:30-06-2024 ರ ಅಂತ್ಯಕ್ಕೆ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸನ್ನದುಗಳ ವಿವರ (ನಗರ ಮತ್ತು ಗ್ರಾಮಾಂತರವಾರು) | | | | |
| ಕ್ರ.ಸಂ | ಸನ್ನದಿನ ವಿಧ | ಪ್ರದೇಶ | | ಒಟ್ಟು |
| | | ನಗರ | ಗ್ರಾಮಾಂತರ | |
| 1 | ಸಿಎಲ್-2 | 2545 | 1449 | 3994 |
| 2 | ಸಿಎಲ್-4 | 210 | 81 | 291 |
| 3 | ಸಿಎಲ್-6ಎ | 78 | 16 | 94 |
| 4 | ಸಿಎಲ್-7 | 1627 | 1131 | 2758 |
| 5 | ಸಿಎಲ್-7ಎ/7ಬಿ/7ಸಿ | 10 | 12 | 22 |
| 6 | ಸಿಎಲ್-8/ಸಿಎಲ್-8ಎ/8ಬಿ | 59 | 11 | 70 |
| 7 | ಸಿಎಲ್-9 | 2615 | 1024 | 3639 |
| 8 | ಸಿಎಲ್-11ಸಿ | 382 | 693 | 1075 |
| 9 | ಸಿಎಲ್-16 | 1 | 2 | 3 |
| 10 | ಸಿಎಲ್-17 | 1 | 20 | 21 |
| 11 | ಸಿಎಲ್-18 | 0 | 7 | 7 |
| 12 | ಸ್ವತಂತ್ರ ಆರ್.ವಿ.ಬಿ | 65 | 0 | 65 |
| 13 | ಹೊಂದಿಕೊಂಡಂತೆ ಆರ್.ವಿ.ಬಿ | 711 | 99 | 810 |
| 14 | ವೈನ್ ಟಾವರಿನ್ | 169 | 42 | 211 |
| 15 | ವೈನ್ ಬೊಟೀಕ್ | 74 | 14 | 88 |
| 16 | ಮೈಕ್ರೋ ಬ್ರೀವರಿ | 72 | 2 | 74 |
| ಒಟ್ಟು | | 8619 | 4603 | 13222 |

ಆಇ 74 ಇಎಲ್‌ಕ್ಯೂ 2024

ಅನುಬಂಧ- 2

| ಕ್ರ. ಸಂ | ಕಡತ ಸಂಖ್ಯೆ | ಅಧಿಕಾರಿ / ನೌಕರರ ಹೆಸರು ಪದನಾಮ ಶ್ರೀಯುತ/ಶ್ರೀಮತಿ | ವಿಷಯ | ಜರುಗಿಸಲಾದ ಕ್ರಮ |
|---|---|---|---|---|
| 1 | ಇಸಿಇ/ಬಿಎನ್‌ಜಿ/ 14 / ಡಿಎಸ್‌ಸಿ (1)/2017-18 EXCISE-17011/30/2021 | 1. ಶ್ರೀ ಗಿರಿ ಜೆ, ಅಬಕಾರಿ ಉಪ ಆಯುಕ್ತರು,<br>2. ಶ್ರೀಮತಿ ಶೈಲಜಾ ಎ ಕೋಟೆ ಅಬಕಾರಿ ಉಪ ಆಯುಕ್ತರು,<br>3. ಶ್ರೀ ಚಂದ್ರ ಪಿ ಅಬಕಾರಿ ಉಪ ಅಧೀಕ್ಷಕರು,<br>4. ಶ್ರೀಮತಿ ಕವಿತಾ ಕೆ., ಅಬಕಾರಿ ನಿರೀಕ್ಷಕರು<br>5. ಶ್ರೀಮತಿ ಗೀತಾ, | ಬೆಂಗಳೂರು ನಗರ (ಪೂರ್ವ) ಜಿಲ್ಲೆಯ ರಾಜಮಹಲ್ ವಲಯ ವ್ಯಾಪ್ತಿಯ ಸಹಕಾರ ನಗರದಲ್ಲಿರುವ ಮೆ: **ನೇಸರ ಗ್ಯಾಂಡ್ ಬಾರ್ ಮತ್ತು ರೆಸ್ಟೋರೆಂಟ** ಎಂಬ ಹೆಸರಿನ ಸಿಎಲ್-9 ಸನ್ನದು ಎರಡೂ ವಲಯ ವ್ಯಾಪ್ತಿಗಳಲ್ಲಿ ಕಾರ್ಯನಿರ್ವಹಿಸಲು ಕಾರಣರಾದ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮದ | ಸರ್ಕಾರದ ಆದೇಶ ಸಂಖ್ಯೆ: ಆಇ 85 ಇಪಿಎಸ್ 2017, ಬೆಂಗಳೂರು, ದಿನಾಂಕ:18-04-2023ರಲ್ಲಿ ಬೆಂಗಳೂರು ನಗರ ಜಿಲ್ಲೆಯ (ಪೂರ್ವ) ರಾಜಮಹಲ್ ವಿಲಾಸ್ ವ್ಯಾಪ್ತಿಯ ಸಹಕಾರ ನಗರದಲ್ಲಿರುವ ಮೆ. ನೇಸರ ಗ್ರಾಂಡ್ ಬಾರ್ & ರೆಸ್ಟೋರೆಂಟ್ ಎಂಬ ಹೆಸರಿನ ಸಿಎಲ್-9 ಸನ್ನದನ್ನು 02 ವಲಯಗಳಲ್ಲಿ ಕಾರ್ಯನಿರ್ವಹಿಸಲು ಕಾರಣರಾದ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ, ಶ್ರೀಮತಿ ಶೈಲಜಾ ಎ. ಕೋಟೆ, ಅಬಕಾರಿ ಉಪ ಆಯುಕ್ತರು ಇವರಿಗೆ ಇನ್ನು ಮುಂದೆ ಸ್ಥಳಾಂತರ ಆದೇಶವನ್ನು ಹೊರಡಿಸುವ ಸಂದರ್ಭದಲ್ಲಿ ನಿಯಮಾನುಸಾರ ಸಂಬಂಧಪಟ್ಟವರಿಗೆ ಪ್ರತಿಯನ್ನು ಗುರುತಿಸುವಲ್ಲಿ ಎಚ್ಚರಿಕೆ ವಹಿಸಿ ಕಾರ್ಯನಿರ್ವಹಿಸುವಂತೆ ಸೂಚಿಸಿ **ಶ್ರೀಮತಿ ಶೈಲಜಾ ಎ. ಕೋಟೆ, ಅಬಕಾರಿ ಉಪ ಆಯುಕ್ತರು ಮತ್ತು ಶ್ರೀ ಜೆ. ಗಿರಿ, ಅಬಕಾರಿ ಉಪ ಆಯುಕ್ತರು** ಇವರುಗಳನ್ನು ಆರೋಪಗಳಿಂದ ದೋಷಮುಕ್ತಗೊಳಿಸಿ ಆದೇಶಿಸಿರುತ್ತದೆ.<br>ಅಬಕಾರಿ ಆಯುಕ್ತರ ಕಛೇರಿ ಆದೇಶ ಸಂಖ್ಯೆ:ಎಕ್ಸೈಜ್- |

| | | | | |
|---|---|---|---|---|
| | | ಅಬಕಾರಿ ನಿರೀಕ್ಷಕರು | ಕುರಿತು | 17011/30/2021/ ಡಿಎಸ್‌ಸಿ, ದಿನಾಂಕ: 07-06-2023 ನೇದ್ದರಲ್ಲಿ ಇದೆ ಪ್ರಕರಣಕ್ಕೆ ಸಂಬಂದಿಸಿದಂತೆ ಆಪಾದಿತರುಗಳಾದ **(1) ಶ್ರೀ ಪಿ ಚಂದ್ರ, ಅಂದಿನ ಅಬಕಾರಿ ಉಪ ಅಧೀಕ್ಷಕರು, ಅಬಕಾರಿ ಉಪ ಆಯುಕ್ತರ ಕಛೇರಿ, ಬೆಂಗಳೂರು ನಗರ ಜಿಲ್ಲೆ (ಪೂರ್ವ) ಹಾಲಿ ಅಬಕಾರಿ ಉಪ ಆಯುಕ್ತರು-04, ಅಬಕಾರಿ ಆಯುಕ್ತರ ಕಛೇರಿ, ಬೆಂಗಳೂರು (2) ಶ್ರೀಮತಿ ಕವಿತಾ ಕೆ., ಅಂದಿನ ಅಬಕಾರಿ ನಿರೀಕ್ಷಕರು, ರಾಜಮಹಲ್ ವಿಲಾಸ್ ವಲಯ ಹಾಲಿ ಅಬಕಾರಿ ಉಪ ಅಧೀಕ್ಷಕರ ಕಛೇರಿ, ಉಪ ವಿಭಾಗ-14, ಬೆಂಗಳೂರು ನಗರ ಜಿಲ್ಲೆ (ಬಿಯುಡಿ-7) ಮತ್ತು (3) ಶ್ರೀಮತಿ ಗೀತಾ ಡಿ., ಅಂದಿನ ಅಬಕಾರಿ ನಿರೀಕ್ಷಕರು,** ಟಿ. ದಾಸರಹಳ್ಳಿ ವಲಯ, ಬೆಂಗಳೂರು ನಗರ ಜಿಲ್ಲೆ(ಉತ್ತರ) ಹಾಲಿ ಅಲಸೂರು ವಲಯ, ಬೆಂಗಳೂರು ನಗರ ಜಿಲ್ಲೆ (ಬಿಯುಡಿ-2) ಇವರುಗಳು ಮುಂದಿನ ದಿನಗಳಲ್ಲಿ ಸನ್ನದು ಸ್ಥಳಾಂತರದ ಆದೇಶವು ಸಂಬಂಧಪಟ್ಟವರಿಗೆಲ್ಲರಿಗೂ ಜಾರಿ ಆಗಿರುವ ಬಗ್ಗೆ ಖಚಿತಪಡಿಸಿಕೊಂಡು ಕಾರ್ಯವ್ಯಾಪ್ತಿಯಲ್ಲಿ ಸಮರ್ಪಕವಾಗಿ ಕಟ್ಟುನಿಟ್ಟಿನ ಜಾರಿ ಮತ್ತು ತನಿಖಾ ಕಾರ್ಯವನ್ನು ನಿರ್ವಹಿಸಲು ಸೂಚಿಸಿ "ಎಚ್ಚರಿಕೆ" ನೀಡಿ ಪ್ರಕರಣವನ್ನು ಈ ಹಂತದಲ್ಲಿಯೆ ಮುಕ್ತಾಯಗೊಳಿಸಿ ಆದೇಶಿಸಿರುತ್ತದೆ. |

**ಆಇ 74 ಇಎಲ್‌ಕ್ಯೂ 2024**

ಅನುಬಂಧ-3

| ಕ್ರ. ಸಂ | ಕಡತ ಸಂಖ್ಯೆ | ಅಧಿಕಾರಿ/ನೌಕರರ ಹೆಸರು ಪದನಾಮ (ಶ್ರೀ/ಶ್ರೀಮತಿ) | ವಿಷಯ | ಜರುಗಿಸಲಾದ ಕ್ರಮ |
|---|---|---|---|---|
| 1) | ಇಸಿಇ/ಬಿಎನ್‌ಜಿ/ 19 / ಡಿಎಸ್‌ಸಿ (1)/2014 | 1. ಶ್ರೀ ಜಗದೀಶ್ ನಾಯಕ್, ಅಂದಿನ ಅಬಕಾರಿ ಉಪ ಆಯುಕ್ತರು<br>2. ಶ್ರೀ ಯೋಗಾನಂದ್, ಅಬಕಾರಿ ಉಪ ಅಧೀಕ್ಷಕರು,<br>3. ಶ್ರೀ ವೈ ಭರತೇಶ್, ಅಬಕಾರಿ ಉಪ ಅಧೀಕ್ಷಕರು.<br>4. ಶ್ರೀ ಸುರೇಶ ಅಬಕಾರಿ ಉಪ ಅಧೀಕ್ಷಕರು.<br>5. ಶ್ರೀಮತಿ ದಿವ್ಯಶ್ರೀ, ಅಬಕಾರಿ ನಿರೀಕ್ಷಕರು.<br>6. ಶ್ರೀ ಚಂದ್ರಶೇಖರ್, ಅಂದಿನ ಅಬಕಾರಿ ನಿರೀಕ್ಷಕರು. | ಶ್ರೀ.ವೈ. ವೆಂಕಟೇಶ್, ಇವರಿಗೆ ನಂ: 256/ಎ/1, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಹೊಸೂರು, ಮುಖ್ಯರಸ್ತೆ, ಆನೇಕಲ್ ತಾಲ್ಲೂಕು ಬೆಂಗಳೂರು ಇಲ್ಲಿಗೆ ನಿಯಮ ಬಾಹಿರವಾಗಿ 2002-03 ನೇ ಸಾಲಿಗೆ ಸಿಎಲ್-7 ಸನ್ನದನ್ನು ಮಂಜೂರು ಮಾಡಲು ಹಾಗೂ 2013-14 ನೇ ಸಾಲಿನವರೆಗೆ ನವೀಕರಿಸಲು ಶಿಫಾರಸ್ಸು ಮಾಡಿದ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಕುರಿತು. | ಸರ್ಕಾರವು ಶ್ರೀ ವೈ. ವೆಂಕಟೇಶ್ ಮೆ: ವಿಷ್ಣು ಹೋಟೇಲ್ಸ್ ಇವರಿಗೆ ಆನೇಕಲ್ ತಾಲ್ಲೂಕು , ಬೆಂಗಳೂರು ಇಲ್ಲಿ ನಿಯಮ ಬಾಹಿರವಾಗಿ 2002-2003ನೇ ಸಾಲಿಗೆ ಹೊಸದಾಗಿ ಸಿಎಲ್-7 ಸನ್ನದನ್ನು ಮಂಜೂರು ಮಾಡಲು ಹಾಗೂ 2013-14 ನೇ ಸಾಲಿನವರೆಗೆ ನವೀಕರಿಸಲು ಶಿಫಾರಸ್ಸು ಮಾಡಿದ ಅಧಿಕಾರಿ/ನೌಕರರುಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಜಂಟಿ ಇಲಾಖಾ ವಿಚಾರಣೆಯನ್ನು ನಿಯಮ 11 ರಡಿ ನಿರ್ದಿಷ್ಟ ಪಡಿಸಿರುವ ಕಾರ್ಯ ವಿಧಾನವನ್ನು ಅನಸರಿಸಿ ಶಿಸ್ತು ಪ್ರಾರಂಭಿಸಲು ಅಬಕಾರಿ ಆಯುಕ್ತರನ್ನು ಶಿಸ್ತು ಪ್ರಾಧಿಕಾರಿಯನ್ನಾಗಿ ನೇಮಿಸಿದ್ದು ಸದರಿಯವರಿಗೆ ದಿನಾಂಕ:11.09.2018 ರಂದು ತಿಳುವಳಿಕೆ ಪತ್ರ ದೊಂದಿಗೆ ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಲಾಗಿರುತ್ತದೆ. ಪ್ರಕರಣದ ಇತರೆ ಅಧಿಕಾರಿ/ನೌಕರರು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ : 5554/2019 C/w 5564/2019, 5708/2019, 5709/2019, 6161/2019 ನ್ನು ದಾಖಲಿಸಿರುತ್ತಾರೆ. ಮಾನ್ಯ ನ್ಯಾಯಾಲಯವು ದಿನಾಂಕ:08/03/2022 ರ ಆದೇಶದಲ್ಲಿ ಅರ್ಜಿದಾರರ ಅರ್ಜಿಗಳನ್ನು ವಜಾಗೊಳಿಸಿರುತ್ತದೆ.<br><br>ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯ |

| | | | | |
|---|---|---|---|---|
| | | | | ದಿನಾಂಕ:08/03/2022 ರ ಆದೇಶವನ್ನು ಪ್ರಶ್ನಿಸಿ ಆಪಾದಿತರಲ್ಲಿ ಒಬ್ಬರಾದ ಶ್ರೀ ವೈ ಭರತೇಶ ಇವರು ರಿಟ್ ಅರ್ಜಿ ಸಂಖ್ಯೆ: 7314/2022 (ಎಸ್-ಕೆಎಸ್ಎಟಿ) ನ್ನು ದಾಖಲಿಸಿರುತ್ತಾರೆ. ಮಾನ್ಯ ನ್ಯಾಯಾಲಯವು ದಿ: 11/04/2022 ರಂದು ಶಿಸ್ತು ಕ್ರಮದ ಮುಂದಿನ ಪ್ರಕ್ರಿಯೆಗೆ ತಡೆಯಾಜ್ಞೆಯನ್ನು ನೀಡಿರುತ್ತದೆ.<br><br>ಈ ವಿಷಯಕ್ಕೆ ಸಂಬಂಧಿಸಿದಂತೆ,ಶ್ರೀ ಕಮಲಾಕರ್ ಹೆಗ್ಗಡೆಕರ್ ಇವರಿಗೆ ಸರ್ಕಾರದ ಆದೇಶ ಸಂಖ್ಯೆ:ಆಇ 86 ಇಪಿಎಸ್ 2014, ಬೆಂಗಳೂರು, ದಿನಾಂಕ:05-03-2021ರಲ್ಲಿ ದಂಡನೆಯನ್ನು ವಿಧಿಸಿರುವುದರಿಂದ ಅದೇ ವಿಷಯಕ್ಕೆ ಸಂಬಂಧಿಸಿದಂತೆ ಸದರಿಯವರ ವಿರುದ್ಧದ ಪ್ರಕರಣವನ್ನು ಈ ಕಛೇರಿಯ ಆದೇಶ ಸಂಖ್ಯೆ:ಇಸಿಇ/ಬಿಎನ್‌ಜಿ/19/ಡಿಎಸ್‌ಸಿ(1)/2014 (ಭಾಗ-2), ದಿನಾಂಕ:09-03-2022 ರನ್ವಯ ಮುಕ್ತಾಯಗೊಳಿಸಿ ಆದೇಶಿಸಲಾಗಿರುತ್ತದೆ.<br><br>ಉಳಿದ ಅಧಿಕಾರಿ/ನೌಕಕರು ಅವರಿಗೆ ಜಾರಿಯಾದ ದೋಷರೋಪಣಾಪಟ್ಟಿಗೆ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಸಮಜಾಯಿಷಿ ಪರಿಶೀಲನೆ ಇರಬೇಕಾದರೆ ಈ ಕೆಳಕಂಡ 05 ಜನ ಅಧಿಕಾರಿ/ನೌಕರರುಗಳು ಅವರಿಗೆ ಜಾರಿಯಾದ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿ ಪ್ರಶ್ನಿಸಿರುತ್ತಾರೆ.<br><br>1. ಶ್ರೀ ಶೇಕಪ್ಪ ಶಿಗ್ಗಾಂವಿ-5709/2019<br>2. ಶ್ರೀಮತಿ ಬಿ.ಹೆಚ್.ದಿವ್ಯಶ್ರೀ-6161/2019 |

| | | | | |
|---|---|---|---|---|
| | | | | 3. ಶ್ರೀ ಪಿ.ಎಸ್.ಸುರೇಶ್-5564/2019<br>4. ಶ್ರೀ ಜಿ.ಚಂದ್ರಶೇಖರ್-5470/2019<br>5. ಶ್ರೀ ವೈ.ಭರತೇಶ್-5554/2019<br><br>ಮೇಲ್ಕಂಡ ಅರ್ಜಿದಾರರ ಅರ್ಜಿಗಳನ್ನು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯು ದಿನಾಂಕ: 08-03-2022 ರಂದು ವಜಾಗೊಳಿಸಿರುತ್ತದೆ.<br><br>ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯ ಅಂತಿಮ ಆದೇಶವನ್ನು 03 ಅಧಿಕಾರಿಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.<br><br>ಶ್ರೀ ವೈ ಭರತೇಶ್, ಇವರು ಮಾನ್ಯ ಉಚ್ಚ ನ್ಯಾಯಾಲಯ ದಲ್ಲಿ ದಾಖಲಿಸಿರುವ ರಿಟ್ ಅರ್ಜಿ ಸಂಖ್ಯೆ: 7314/2022 (S-KSAT) ರ ದಿನಾಂಕ: 11-04-2022 ರಂದು ಪ್ರಕರಣದಲ್ಲಿ ಹಾಗೂ ಶ್ರೀಮತಿ ದಿವ್ಯಶ್ರೀ, ಅಂದಿನ ಅಬಕಾರಿ ನಿರೀಕ್ಷಕರು ಇವರು ದಾಖಲಿಸಿರುವ ರಿಟ್ ಅರ್ಜಿ ಸಂಖ್ಯೆ: 16175/2023 ರಲ್ಲಿ ದಿನಾಂಕ: 27-07-2023 ರಂದು ನೀಡಿರುವ ತಡೆಯಾಜ್ಞೆ ಹಾಗೂ ಶ್ರೀ ಶೇಖಪ್ಪ ಶಿಗ್ಗಾಂವ್, ಅಂದಿನ ಅಬಕಾರಿ ನಿರೀಕ್ಷಕರು ಇವರು ದಾಖಲಿಸಿರುವ ರಿಟ್ ಅರ್ಜಿ ಸಂಖ್ಯೆ: 8302/2024 ರಲ್ಲಿ ದಿನಾಂಕ: 28-03-2024 ರಂದು ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಯು ತೆರವಾದ ನಂತರ ಉಳಿದ ಅಧಿಕಾರಿ/ನೌಕರರ ವಿರುದ್ಧದ ವಿಚಾರಣೆಯನ್ನು ಜಂಟಿಯಾಗಿ ಮುಂದುವರೆಸಲಾಗುವುದು. |

| | | | | |
|---|---|---|---|---|
| 2) | ಎಕ್ಸೈಜ್-17011/72/ 2020 | 1) ಸತೀಶ್ ಕಾಗಲಿ, ಅಬಕಾರಿ ನಿರಿಕ್ಷಕರು, ಚಿಂಚೋಳಿ, ಕಲಬುರಗಿ ಜಿಲ್ಲೆ.<br><br>2)ಗೋಪಾಲ ಪಂಡಿತ, ಅಬಕಾರಿ ಉಪ ಅಧೀಕ್ಷಕರು. | ಶ್ರೀ ಬಸಯ್ಯ ತಂದೆ ಲಕ್ಷ್ಮಯ್ಯ ಗುತ್ತೇದಾರ ಇವರು, ಜೇವರ್ಗಿ ತಾಲ್ಲೂಕು, ಚಿಗರಹಳ್ಳಿ ಕ್ರಾಸ್‌ನ ಕಟ್ಟಡ ಸಂಖ್ಯೆ ಟಿ1-12, 1-13, 1-14 ಮತ್ತು 1-34 ಸರ್ವೆ ನಂ.46ರಲ್ಲಿ ಸಿ.ಎಲ್-7 ಸನ್ನದು ಮಂಜೂರು ಮಾಡಿರುವ ಬಗ್ಗೆ. | ಅಪಾದಿತರುಗಳ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಲಾಗಿದ್ದು, ವಿಚಾರಣೆ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ. |
| 3) | ಕಡತ ಸಂಖ್ಯೆ:ಇಸಿಇ/ 01/ಡಿಎಸ್‌ಸಿ(2)/ಹೊಸ ಪೇಟೆ ವಿಭಾಗ/ 2019. | 1. ಶ್ರೀ ರವಿ ನಾಗರಾಳ, ಅಬಕಾರಿ ನಿರೀಕ್ಷಕರು, ಕೆ.ಎಸ್.ಬಿ.ಸಿ.ಎಲ್ ಡಿಪೋ, ಗದಗ.<br><br>2. ಶ್ರೀ ಮಲ್ಲಿಕಾರ್ಜುನ ರೆಡ್ಡಿ, ಅಂದಿನ ಅಬಕಾರಿ ಉಪ ನಿರೀಕ್ಷಕರು, ಗದಗ ವಲಯ, ಗದಗ. | ಕರ್ನಾಟಕ ಅಬಕಾರಿ (ಸ್ವದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳನ್ನು ಉಲ್ಲಂಘಿಸಿ ಗದಗ-ಬೆಟಗೇರಿ ಪಟ್ಟಣದ ನಗರ ಸಭೆ ವ್ಯಾಪ್ತಿಯಲ್ಲಿ ಸಿಎಲ್-7 ಸನ್ನದನ್ನು ಹೊಸದಾಗಿ ಮಂಜೂರು ಮಾಡಲು ಪ್ರಸ್ತಾವನೆಯನ್ನು ಕಳುಹಿಸಿರುವ ಆರೋಪ. | ಸದರಿ ಪ್ರಕರಣಕ್ಕೆ ಸಂಬಂದಿಸಿದಂತೆ ಮಾನ್ಯ ಲೋಕಾಯುಕ್ತ, ಬೆಂಗಳೂರು ಇವರ ವಿಚಾರಣಾ ವರದಿರನ್ವಯ ಆಪಾದಿತರಿಗೆ 2ನೇ ಕಾರಣ ಕೇಳಿ ನೋಟಿಸ್ ಜಾರಿ ಮಾಡಲಾಗಿದ್ದು, ಪ್ರಕರಣವು ಇತ್ಯರ್ಥಕ್ಕೆ ಬಾಕಿ ಇರುತ್ತದೆ. |